Volume: 2 Issue: 10 Pages: 50-52




# ಸಿರಿಸಂಪದ ಗ್ರಂಥ ಸಂಪಾದಕರ ಅಭಿನವ ಮಣಿಹ

*[1] **ಡಾ.ಸಣ್ಣೀರಪ್ಪ ಹಾಲಪ್ಪ ದೊಡ್ಡಮನಿ**

*[1] ಸಹ ಪ್ರಾಧ್ಯಾಪಕರು ಎಸ್.ಎಮ್.ಭಂಡಾರಿ ಮತ್ತುರಾಟಿ ಪದವಿ ಮಹಾವಿದ್ಯಾಲಯ ಗುಳೇದಗುಡ್ಡ ಬಾಗಲಕೋಟೆ ಜಿಲ್ಲೆ, ಕರ್ನಾಟಕ, ಭಾರತ

**Article Info.**
**E-ISSN: 2583-6528**
**Impact Factor (SJIF): 5.231**
**Peer Reviewed Journal**
**Available online:**
**www.alladvancejournal.com**

**Received:** 20/Sep/2023
**Accepted:** 25/Oct/2023

***Corresponding Author**
**ಡಾ.ಸಣ್ಣೀರಪ್ಪ ಹಾಲಪ್ಪ ದೊಡ್ಡಮನಿ**
ಸಹ ಪ್ರಾಧ್ಯಾಪಕರು
ಎಸ್.ಎಮ್.ಭಂಡಾರಿ ಮತ್ತುರಾಟಿ ಪದವಿ ಮಹಾವಿದ್ಯಾಲಯ
ಗುಳೇದಗುಡ್ಡ ಬಾಗಲಕೋಟೆ ಜಿಲ್ಲೆ, ಕರ್ನಾಟಕ, ಭಾರತ

**Abstract**
ಶಿಕ್ಷಕ' (ಶಿವ ಸ್ವರೂಪ) ಹುದ್ದೆಗೆ ನ್ಯಾಯ ಒದಗಿಸಿ ಕೊಟ್ಟಿದ್ದಾರೆ. ಅವರ ಏಕಾಂತ ನಿಷ್ಠೆಯ ಅಧ್ಯಯನ, ಕಾಯಕ ನಿಷ್ಠೆಯ ಅಧ್ಯಾಪನ, ಪೂರ್ವೈಸುತ್ತ ಬಂದ ಮಹಾನ್ ಸಂಶೋಧನಾ ನಿಷ್ಠ ವ್ಯಕ್ತಿತ್ವವುಳ್ಳ ಅವರು ಕನ್ನಡದ ದೊಡ್ಡ ಸಂಪತ್ತು. ಜೈನ, ಶೈವ. ಲಿಂಗಾಯತದಂತಹ ಹಸ್ತಪ್ರತಿ ಶಾಸ್ತ್ರದಂತಹ ಶಾಸ್ತ್ರ ಸಮ್ಮತ ವಿದ್ಯೆಯಲ್ಲಿತಮ್ಮ ವಿದ್ಯೆಯನ್ನುಶ್ರೀಮಂತಗೊಳಿಸಿದ ಡಾ.ಬಿ.ವಿ. ಶಿರೂರ ಅವರ ಬದುಕಿನೊಂದಿಗೆ ಗ್ರಂಥ ಸಂಪಾದನೆಯನ್ನೇಮುಖ್ಯವಾಗಿಟ್ಟುಕೊಂಡು ಕೆಲಸ ಮಾಡಿದ ವಿದ್ವಾನ್ಸ್ಣಗಳ ಜೀವನ ಪರಿಚಯ ಹಾಗೂ ಅವರ ಸಾಧನೆಗಳನ್ನುಪ್ರಪ್ರಥಮವಾಗಿ ಗುರ್ತಿಸುವ ಕೆಲಸವನ್ನುಫ. ಗು. ಹಳಕಟ್ಟಿಯವರ ಸಂಸ್ಕರಣ ಸಂಪುಟ 'ಮಣಿಹ'ದಲ್ಲಿಮಾಡಲಾಗಿದೆ. ಕನ್ನಡ ನಾಡಿನಲ್ಲಿಶ್ರವಣ ಬೆಳ್ಗೊಳದ ಸಾಂಸ್ಕೃತಿಕ ಮಹತ್ವದ ಸಂಶೋಧನ ಗಾಳಿಯನ್ನುಬಾನೆತ್ತರಕ್ಕೂಪಸರಿಸುವಂತೆ ಅವರ ಪಟ್ಟ ಶ್ರಮ ಅವರ ಮಹಾಪ್ರಬಂಧವಾದ 'ಶ್ರವಣ ಬೆಳ್ಗೊಳದ ಸಾಹಿತ್ಯಕ ಸಾಂಸ್ಕೃತಿಕ ಮಹತ್ವ'ದ ವಿವೇಚನೆಯಿಂದ ಅರಿವು ಹೆಚ್ಚಿಸುತ್ತಿದೆ.

**Keywords:** ಶ್ರ.ಬೆ:- ಶ್ರವಣಬೆಳಗೊಳ ಫ.ಗು:- ಫಕೀರಪ್ಪ ಗುರಪ್ಪ ಹಳಕಟ್ಟಿ. ಸಂ.ಸಂ:ಸಂಸ್ಕರಣ ಸಂಪುಟ. ತಾ.ಮಾ.:-ರಾಜಮಾರ್ಗ ಮ.ಮಾ:-ಮಹಾಮಾರ್ಗ

## Introduction

ಆರಾತೀಯ ಅರ್ಜಿತ ಬುತ್ತಿ: ಯಾವ ಬರವಣಿಗೆಯು ಕಾಲಘಟ್ಟದಲ್ಲಿತನ್ನ ಅಚ್ಚಾದಿತ ರೂಪವನ್ನುತೆರೆದು, ಅಂತರಿಕೆ ಸಂಸ್ಕೃತಿಯ ಕುರುಹುಗಳನ್ನುಪ್ರಚುರ ಪಡಿಸುತ್ತಿದೆಯೋಅದು ಲೇಖನಿಯ ಸಂಜೀವಿನಿ ಶಕ್ತಿಯಾಗಿ ಅಜರಾಮರ- ಗೊಳ್ಳುವಂತಹದ್ದು.

"ಶಿಕ್ಷಕ ವರ್ಗಕೋಣೆಯಿಂದ ವಿಚಾರ ಸಂಕಿರಣದ ವೇದಿಕೆಗೆ ಇನ್ನೂಇತ್ತೀಚೆಗೆ ಬೀದಿಯ ಮೆರವಣಿಗೆಗೆ ಇಳಿದಿರುವ ಸಂದರ್ಭದಲ್ಲಿಡಾ. ಬಿ. ವಿ. ಶಿರೂರ ಅವರಂತಹ ವರ್ಗಕೋಣೆಯನ್ನುಪ್ರೀತಿಸುವ ಶಿಕ್ಷಕರು ತುಂಬ ಮುಖ್ಯರೆನಿಸುತ್ತಾರೆ. ಈ ಪ್ರಾಮುಖ್ಯತೆಯನ್ನುಗಮನಿಸಿ, ಅವರಿಗೆ ಅರ್ಪಿಸುತ್ತಲಿರುವ ಈ ಗ್ರಂಥ, ಅವರೊಳಗಿನ ಶುದ್ಧ ಶಿಕ್ಷಕನಿಗೆ ಅರ್ಪಿತವಾಗಿದೆಯೆಂದು ಭಾವಿಸುತ್ತೇನೆ" ಎಂದು ಡಾ. ಎಂ. ಎಂ. ಕಲಬುರ್ಗಿಯವರು ಹೇಳಿದ ಮಾತು ತುಂಬ ಮಹತ್ವದ್ದು. ಯಾಕೆ ಈ ಮಾತು ಹೇಳಿದ್ದಾರೆಂದರೆ, ಮಾನವುಳ್ಳವರ ಬದಕು ಇಂದು ಶೋಚನೀಯವಾಗಿದೆ. ಯಾವ ಕೆಲಸ ಯಾರಿಂದ ಆಗಬೇಕಿದೆಯೋಅವರಿಂದ ಅಗ್ತಾಯಿಲ್ಲ. ಅದು ಬಟ್ಟ ಬೇರೆಯೇನಡೆಸುವಂತಹವರು ಇಂದು ನಮ್ಮ ಮಧ್ಯದಲ್ಲಿಹೆಚ್ಚಿದ್ದಾರೆ. ಅಂತಹವರಲ್ಲಿಡಾ. ಶಿರೂರು ಅವರು ಇಂಥ ಅಪ್ಪಟ ಕರ್ತವ್ಯಶೀಲರು ಸಮಾಜದಲ್ಲಿತಾಂಡವಾಡುತ್ತಿರುವ ಅಧಿಕಾರದ ಲಾಲಸೆಯಿಂದ ದೂರ ಉಳಿದು ಸಂಶೋಧನ ಶಕ್ತಿಯನ್ನುಹೆಚ್ಚಿಸಿದ್ದಾರೆ.

ಅವರ ವೈಯಕ್ತಿಕ ಜೀವನ ವೃತ್ತಿಯ ಜೀವನದ ಅಂತಿಮದಲ್ಲಿನಲಿವಿನಿಂದ ಕೂಡಿದ್ದರೂ ಅವುಗಳ ಹಿಂದೆ ನೋವು ನಿರಂತರ ಶೃತಿ ಹಿಡಿದು ಇಂದು ಅದು ಸತ್ವಯುತ ನಾದವಾಗಿ ಹೊರಹೊಮ್ಮಿರುವುದು ಕಂಡು ಬರುತ್ತದೆ. ಅದನ್ನುಇನ್ನೂಸ್ವಲ್ಪ ಇಣುಕಿ ನೋಡುವದಾದರೆ ಅವರು ಎಳೆಯ ವಯಸ್ಸಿನಲ್ಲಿಯೇತಾಯಿಯನ್ನುಕಳೆದು ಕೊಂಡದ್ದು, ಸಮಾಜಕ್ಕೆಶ್ರೀಮಂತ ಸೇವೆ ಒದಗಿಸಿದ ತಂದೆ, ಮಗನಿಗೆ ಬಡತನ ಉಳಿಸಿಸ ಅಗಲಿದ್ದುಇತ್ಯಾದಿಗಳು ಅವರ ಜೀವನದ ಗತಿಯಾಗಿವೆ. ಇನ್ನುವೃತ್ತಿಜೀವನಕ್ಕೆಬಂದರೆ, ತಮ್ಮ ವಿದ್ವತ್ಪತಿಭೆಯಿಂದ ವಿಶ್ವವಿದ್ಯಾಲಯದ ಮಟ್ಟಕ್ಕೆಬಂದರೂ ದುಷ್ಟ ವಿರೋಧಿಗಳು ಅವರಿಗೆ ಯಾವ ಅಧಿಕಾರದ

ಜ್ಯಾಡ್ನಕ್ಕೂಅಂಟದಂತೆ ತಡೆದಿರುವದು. ಇಂಥ ಅನೇಕ ಕತ್ತಲು- ಬೆಳಕುಗಳ ನಡುವೆಯೂ ಇವರು ಯಾವ ಶೋಷಣೆಯ ಮನೋಭಾವಕ್ಕೆಒಳಗಾಗದೇಕರ್ತವ್ಯ ನಿಷ್ಠೆಯಿಂದ ಶ್ರಮಿಕರಾಗಿ ದುಡಿದು. ಶ್ರಮ ಸಂಸ್ಕೃತಿಯನ್ನುತಮ್ಮ ರಕ್ತಗತವಾಗಿಸಿಕೊಂಡು ಬದಕನ್ನುಶ್ರೀಗಂಧದಂತೆ ತೀಡಿ ಬೋಧನೆ, ಸಂಶೋಧನೆ ಈ ಎರಡೂ ನೆಲೆಗಳಿಂದ 'ಶಿಕ್ಷಕ' (ಶಿವ ಸ್ವರೂಪ) ಹುದ್ದೆಗೆ ನ್ಯಾಯ ಒದಗಿಸಿ ಕೊಟ್ಟಿದ್ದಾರೆ. ಅವರ ಏಕಾಂತ ನಿಷ್ಠೆಯ ಅಧ್ಯಯನ, ಕಾಯಕ ನಿಷ್ಠೆಯ ಅಧ್ಯಾಪನ, ಪೂರೈಸುತ್ತ ಬಂದ ಮಹಾನ್ ಸಂಶೋಧನಾ ನಿಷ್ಠ ವ್ಯಕ್ತಿತ್ವವುಳ್ಳ ಅವರು ಕನ್ನಡದ ದೊಡ್ಡ ಸಂಪತ್ತು.

ಅವರು ನೀಡಿದ ಚಾರಿತ್ರಿಕ, ಸಾಂಸ್ಕೃತಿಕ, ಸಂಶೋಧನೆ ಕನ್ನಡ ಜಗತ್ತಿಗೆ ಕಾಣಿಕೆಯಾಗಿ ನೀಡಿದ ಎದ್ವತ್ ಪೂರ್ಣವಿಷಯ ಅಪಾರವಾದದ್ದು, ವಿದ್ಯಾರ್ಥಿಗಳು, ನಾಡಿನ ಸಂಶೋಧನಾ ಚಿಂತಕರು ಪ್ರೀತಿಯಿಂದ ಅಭಿನಂದ ಗ್ರಂಥ ಅರ್ಪಿಸಿದ 'ಸಿರಿ ಸಂಪದ' ನಾಡಿನ ಹೆಮ್ಮೆ. ಇದರಲ್ಲಿಮೂರು ಭಾಗಗಳುಂಟು.

ಈ ಕೃತಿಯ ಮೊದಲನೆಯ ಭಾಗದಲ್ಲಿನುಡಿ ಸಾಹಿತ್ಯಕ್ಕಾಗಿ ಅಮೂಲ್ಯವಾದ ಸೇವೆಯನ್ನುಸಲ್ಲಿಸಿದ ಪ್ರಾಚೀನ ಮೊಗ್ಲಿಂಗ್ ರಿಂದ ಹಿಡಿದು ಇಂದಿನ ಹೊಸ ಗ್ರಂಥ ಸಂಪಾದಕರಾದ ಮೈ.ಸಿ. ಬಾನುಮತಿಯರ ವರೆಗೂ ಒಟ್ಟು೬೪ಳ ಜನ ವಿದ್ವಾಂಸರ ಗ್ರಂಥ ಸಂಪಾದಕರ ಶ್ರಮ ಸಾಧನೆಗಳನ್ನುವಿವರವಾಗಿ ಮಾದರಿಗೊಳ್ಳುವಂತೆ ೬೦ ಲೇಖನಗಳಲ್ಲಿಅರ್ಥಪೂರವಾಗಿ ಹಿಡಿದಿಟ್ಟಿರುವದು ಸ್ತುತ್ಯರ್ಹವಾದದು. ಇದರಲ್ಲಿಗ್ರಂಥ ಸಂಪಾದನಾ ಕ್ಷೇತ್ರದಲ್ಲಿಸಲ್ಲಿಸಿದ ಸೇವೆ ಅವರ ಶ್ರಮ ತೆರೆದುಕೊಂಡಿದೆ. ಇದು ಮಾದರಿಯ, ನೂರೈವತ್ತುವರ್ಷಗಳ ಇತಿಹಾಸ ಹೊಂದಿದ ಕನ್ನಡ ಗ್ರಂಥ ಸಂಪಾದನೆ ಮುಖಾಂತರ ಸಂಸ್ಕೃತಿಯನ್ನುರಾಶಿಗೊಳಿಸುವಲ್ಲಿಶ್ರಮಿಸಿದವರನ್ನುನಾಲ್ಕು ತಲೆ ಮಾರುಗಳಲ್ಲಿಗುರುತಿಸಿರುವರು. ಮೊದಲನೆಯ ತಲೆಮಾರಿನಲ್ಲಿಹರ್ಮನ್ ಮೊಗ್ಲಿಂಗ್, ಕಿಟ್ಟೆಲ್, ರೈಸ್ ಮುಂತಾದ ವಿದೇಶಿ ವಿದ್ವಾಂಸರಾದೆ, ಎರಡನೇತಲೆಮಾರಿನಲ್ಲಿಎಂ. ಎ. ರಾಮಾನುಜಯ್ಯಂಗಾರ, ಆರ್. ನರಸಿಂಹಾಚಾರ್, ಚನ್ನಪ್ಪ ಉತ್ತಂಗಿ, ಫ. ಗು. ಹಳಕಟ್ಟಿ, ಶಿ. ಶಿ. ಬಸವನಾಳ ಮೊದಲಾದ ದೇಶಿ ಪಂಡಿತರ ಚರಿತ್ರೆಯನ್ನುಕಾಣಬಹುದು. ಮೂರನೆಯ ತಲೆ ಮಾರು ಡಿ.ಎಲ್.ನ್. ತೀನಂಶ್ರೀ, ಟಿ. ಎಸ್. ವೆಂಕಣ್ಣಯ್ಯ, ಇವರ ಸಮಕಾಲಿನರಾದರೆ, ನಾಲ್ಕನೆಯ ತಲೆ ಮಾರು ಡಾ. ಆರ್. ಸಿ. ಹಿರೇಮಠ, ಬಿ. ಎಸ್. ಸಣ್ಣಯ್ಯ, ಎಂ. ಎಂ. ಕಲಬುರ್ಗಿ, ಹಂಪನಾ ಇಂಥ ಮುಂತಾದ ಸಂಪಾದಕರಿಂದ ಈ ಕ್ಷೇತ್ರ ಕಾಲದಿಂದ ಕಾಲಕ್ಕೆನವೀನತೆಯನ್ನುಪಡೆದು ಕೊಳ್ಳುತ್ತಾಬಂದಿದೆ. ಇದೇಗುಂಪಿನ ಕೊಂಡಿಯಾಗಿ ಪಾಂಡಿತ್ಯಕ್ಕೆಶಾಸನೋಕ್ತ ಸವಾಲು ಎಂಬಂತೆ ಜೈನ, ಶೈವ. ಲಿಂಗಾಯತದಂತಹ ಹಸ್ತಪ್ರತಿ ಶಾಸ್ತ್ರದಂತಹ ಶಾಸ್ತ್ರ ಸಮ್ಮತ ವಿದ್ಯೆಯಲ್ಲಿತಮ್ಮ ವಿದ್ಯೆಯನ್ನುಶ್ರೀಮಂತಗೊಳಿಸಿದ ಡಾ. ಬಿ. ವಿ. ಶಿರೂರ ಅವರ ಬದುಕಿನೊಂದಿಗೆ ಗ್ರಂಥ ಸಂಪಾದನೆಯನ್ನೇಮುಖ್ಯವಾಗಿಟ್ಟುಕೊಂಡು ಕೆಲಸ ಮಾಡಿದ ವಿದ್ವಾನ್ಸಣಗಳ ಜೀವನ ಪರಿಚಯ ಹಾಗೂ ಅವರ ಸಾಧನೆಗಳನ್ನುಪ್ರಪ್ರಥಮವಾಗಿ ಗುರ್ತಿಸುವ ಕೆಲಸವನ್ನುಫ. ಗು. ಹಳಕಟ್ಟಿಯವರ ಸಂಸ್ಕರಣ ಸಂಪುಟ 'ಮಣಿಹ'ದಲ್ಲಿಮಾಡಲಾಗಿದ್ದರೂ, ಅಲ್ಲಿಕೇವಲ ಪೂರ್ವಆರಾತೀಯ ವಿದ್ವಾಂತಸರ ಸಾಧನೆಗಳನ್ನುಮಾತ್ರ ಉಲ್ಲೇಖಿಸುವ ಕೆಲಸ ಮಾಡಿದರೆ, ನಂತರ ಈ ಕ್ಷೇತ್ರದಲ್ಲಿಸಾಕಷ್ಟುವಿದ್ವಾಂಸರು ಶ್ರಮವಹಿಸಿರುವದನ್ನುಈ ಅಭಿನವ ಮಣಿಹ 'ಸಿರಿ ಸಂಪದ'ದ

ಕನ್ನಡಿಯಲ್ಲಿಕಾಣಬಹುದು. ಇಂತಹ ಮಹನೀಯರನ್ನುಗುರ್ತಿಸುವ ಕಾರ್ಯದಲ್ಲಿ'ಮಣಿಹ' 'ಆದಿ' ಪ್ರಯತ್ನವಾದರೆ, 'ಸಿರಿ ಸಂಪದ' ಅದಕ್ಕಿಂತ ಒಂದು ಹೆಜ್ಜೆಮುಂದೆ ಹೋಗಿ 'ಅಭಿನವ' ಪ್ರಯತ್ನವನ್ನುಎಲ್ಲ ರೀತಿಯಿಂದಲೂ ಸುವಿವರವಾಗಿ ತಿಳಿಸುವಲ್ಲಿನೈಜ ಪ್ರಯತ್ನವಾಗಿದೆ. ಗ್ರಂಥ ಸಂಪಾಧನೆಯ ಅಭ್ಯಾಸಿಗಳು ಅಧ್ಯಯನ ಮಾಡುವ ಸಮಗ್ರ ಮಾದರಿಯ ದಾಖಲೆಯಾಗಿದೆ.

ಎರಡನೆಯ ಭಾಗದಲ್ಲಿಈ ಗ್ರಂಥದ ವಿಷಯಕ್ಕೆಕೇಂದ್ರ ಬಿಂದುವಾದ ಡಾ. ಬಿ. ವಿ. ಶಿರೂರ ಅವರ ವ್ಯಕ್ತಿತ್ವವನ್ನುಒಡಲ ಪಡಿನರಾಳಾಗಿಸಿದೆ. ಕರ್ನಾಟಕದ ಇತಿಹಾಸವನ್ನುಬಿಚ್ಚಿಡುವುದರಲ್ಲಿಅದರ ಆತ್ಮ ಗೌರವವನ್ನುಎತ್ತಿಹಿಡಿಯುವಲ್ಲಿಜೀವನದುದ್ದಕ್ಕೂಸತ್ಯವನ್ನು ಒಂದು ಸುದೈವವಾಗಿಸಿ ಆರಾಧಿಸಿಕೊಂಡು ಬಂದದ್ದು, ಅಧಿಕಾರ ಸ್ಥಾನಮನ, ಧನ ಯಾವದಕ್ಕೂಭಾಗದೇತಮ್ಮ ಅಂತಕ್ಷ್ಯತನ್ಯದ ಉಜ್ವಲ ವಿರಳ ನಿದರ್ಶನವಾಗಿ ಸಾಹಿತ್ಯ ಲೋಕದಲ್ಲಿಮಿನುಗಿದ್ದನ್ನುಚರಿತ್ರೆಯಾಗಿ ಕಾಣಬಹುದು. ಜನರ ಮನ ನೊಂದಿತೆಂಬ ಬಯದಿಂದ ಸತ್ಯಕ್ಕೆಅವಮಾನವನ್ನುಮಾಡಿದವರಲ್ಲ. ಅನುಕೂಲತೆಗಿಂತ ಆತ್ಮ ಗೌರವ ಹೆಚ್ಚಿನದು. ಲಾಭಕ್ಕಿಂತ ತತ್ವನಿಷ್ಠೆಹೆಚ್ಚಿನದು ಎಂದರಿತು ಆತ್ಮ ಗೌರವ ನಿಷ್ಠೆಯಿಂದ ಸಮಾಜದಲ್ಲಿಮಾದರಿಯಾದದನ್ನುಮನಗಾಣಿಸುವಂತಹದ್ದು . ಇದರಲ್ಲಿ ಇನ್ನೊಂದು ಬಹುಮುಖ್ಯ ಸಾಹಿತ್ಯದ ಅಖರವಾದ ಅವರ 'ಆತ್ಮ ಚರಿತ್ರೆ' ಯೂ ಇದರಲ್ಲಿ'ಹಿಂದಣ ಹೆಜ್ಜೆ' ಎಂಬ ಲೇಖನದಿಂದ ಅವರ ಅಂತರಾತ್ಮದ ವ್ಯಕ್ತಿತ್ವಕ್ಕೆಸಂಬಂಧಿಸಿದ ಅಂತಹ ಛಾಯೆ ಮೂಡಿ ಬಂದಿರುವದು ಈ ಪ್ರತಿಗೆ ಇನ್ನೂಹೆಚ್ಚಿನ ಶ್ರೇಸ್ಸಾಗಿದೆ.

ಮುರನೆಯ ಭಾಗದಲ್ಲಿಅವರು ಒಡಮೂಡಿಸಿದ ಸಾಹಿತ್ಯದ ಕುರುಹು ಇದೆ. ಜೇಡ ಜಾತಿಯಂದದ ಚಿತ್ತಾರವನ್ನುಮೂಡಿಸಿದ್ದನ್ನುಯಥಾವತ್ತಾಗಿ ಚಿತ್ರಿಸಿರುವರು. ಕಾವೇರಿಯಿಂದ ಮಹಾಗೋದಾವಿಯವರಿಗೂ ಇರುವ ಕನ್ನಡ ನಾಡಿನಲ್ಲಿಶ್ರವಣ ಬೆಳ್ಗೊಳದ ಸಾಂಸ್ಕೃತಿಕ ಮಹತ್ವದ ಸಂಶೋಧನ ಗಾಳಿಯನ್ನುಬಾನೆತ್ತರಕ್ಕೂಪಸರಿಸುವಂತೆ ಅವರ ಪಟ್ಟ ಶ್ರಮ ಅವರ ಮಹಾಪ್ರಬಂಧವಾದ 'ಶ್ರವಣ ಬೆಳ್ಗೊಳದ ಸಾಹಿತ್ಯಕ ಸಾಂಸ್ಕೃತಿಕ ಮಹತ್ವ'ದ ವಿವೇಚನೆಯಿಂದ ಅರಿವು ಹೆಚ್ಚಿಸುತ್ತಿದೆ. ಹಾಗೆ 'ಸಂಶೋಧನ ಸ್ವರೂಪ'ದಲ್ಲಿಯಾವ ರೀತಿಯಾಗಿ ವಿಷಯ ಹುಡುಕಬೇಕು: ಯಾವ ರೀತಿ ಕ್ಷೇತ್ರ ಕಾರ್ಯಮಾಡಬೇಕು: ಯಾವ ರೀತಿ ಗ್ರಂಥ ಕಟ್ಟಬೇಕು? ಇತ್ಯಾದಿಯಾಗಿ ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಅವರ ಶೋಧಿತ 'ಮೊಳೆ ಬೊಮ್ಮಯಗಳ ಕಾವ್ಯ' ಅದರ ಕರ್ತೃ, ಅವನ

ಕಾಲ ಇತ್ಯಾದಿ ಅದ್ಭುತ ಆಶ್ಚರ್ಯಚಕಿತ ವಸ್ತುವಲ್ಲದೇ, 'ರತ್ನ ಕರಂಡಕದ ಕಥೆಗಳು' ಎರಡನೆಯ ಮಹಾನ್ ಗದ್ಯ ಗ್ರಂಥದ ಸೊಗಸು, 'ಯಲಬುರ್ಗಿಯ ಸಿಂದರು; ಅಂದಿನ ಕಾಲದ ಅರಸು ಮನೆತನವನ್ನು-ಬೆಳಕಿಗೆ ತಂದ ಹೊಸ ವಿಷಯ ಇತ್ಯಾದಿಯಾಗಿ, ಹಾಗೆ ಶಾಸ್ತ್ರ ವಿಷಯ ಗಂಭೀರ ಸಾಹಿತ್ಯದ ಆಳ ಮತ್ತುಸಂಸ್ಕೃತಿಯ ಹೊರಗಿರಣಗಳನ್ನುಗುರುತಿಸಿ ಕೊಳ್ಳುವಂತಿದೆ. ಅದರ ಮಾರ್ಗದರ್ಶಿಸೂತ್ರ ಅನ್ವಯಿಸಕೊಂಡವರು. ಅದೃಷ್ಟವಂತರೇಸರಿ.

ಆದರೆ ಒಂದು ಮಾತು ಸತ್ಯ, ಸಂಶೋಧನ ಸಾಹಿತ್ಯದ ಮಜಲು, ಗ್ರಂಥ ಆರಿತು ಅರ್ಥೈಸಿಕೊಳ್ಳುವ, ತವಕವುಳ್ಳ ಪ್ರತಿಯೊಬ್ಬ ಜೀವಿಗೂ ಇದು ವಜ್ರದ ಬೆಳಕು ನೀಡುವಂತಹ ಗ್ರಂಥ. ಈ ಗ್ರಂಥ ಹೊರ ತರುವಲ್ಲಿಪ್ರವಾಸಿದವರೆಲ್ಲರಿಗೂ ಕೃತಜ್ಞತೆಗಳು.

## References


1. ಸಿರಿಸಂಪದ-ಡಾ.ಬಿ.ವಿ.ಶಿರೂರು ಅಭಿನಂದನ ಗ್ರಂಥ ಸಂಪಾದಕರು ಡಾ. ಎಫ್. ಟಿ. ಹಳ್ಳಿಕೇರಿ ಮತ್ತು ಡಾ. ಕೆ. ರವೀಂದ್ರನಾಥ್-೨೦೦೦
2. ಮಹಾಮಾರ್ಗ ಡಾ. ಎಂ. ಎಂ. ಕಲಬುರ್ಗಿ ಅಭಿನಂದನ ಗ್ರಂಥ-

3. ಅಂತರಂಗದ ರತ್ನ ಡಾ.ಗುರುಲಿಂಗ ಕಾಮಸೇ ಅಭಿನಂದನ ಗ್ರಂಥ
4. ರಾಜಮಾರ್ಗ ಡಾ.ವೀರಣ್ಣ ರಾಜೂರವರ ಅಭಿನಂದನ ಗ್ರಂಥ ಸಾಹಿತ್ಯ-ಸಂಶೋಧನೆ:
5. ಕನ್ನಡದಲ್ಲಿ ಸಾಂಗತ್ಯ ಸಾಹಿತ್ಯ (ಪ್ರಚಾರೋಪನ್ಯಾಸ) ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
6. ಕನ್ನಡ ಸಾಂಗತ್ಯ ಸಾಹಿತ್ಯ (ಪಿಎಚ್.ಡಿ. ಪ್ರಬಂಧ) ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
7. ವಚನ ಅಧ್ಯಯನ (ಸಂಪ್ರಬಂಧಗಳ ಸಂಕಲನ) ಪ್ರ: ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ, ಮುಂಡರಗಿ ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ
8. .ಸ್ವರವಚನಗಳು (ಪ್ರಚಾರೋಪನ್ಯಾಸ) ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
9. ವಿಚಾರಪತ್ನಿಯರು (ಶಿವಶರಣೆಯರ ಕಿರುಪರಿಚಯ) ಪ್ರ: ಮಂಗಳ ಪ್ರಕಾಶನ, ಧಾರವಾಡ ಶ್ರೀ ಬಸವೇಶ್ವರ ಪೀಠ, ಕವಿವಿ ಧಾರವಾಡ
10. ಬಸವೋತ್ತರಯುಗದ ವಚನಕಾರರು ಪ್ರ: ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಸುಕ್ಷೇತ್ರ, ಹಾರಕೂಡ